ಸ್ಯ 1890ನೇ ಇಸವಿ ಮಿಸಲೇನಿಯಸ್ ಪಿಟಿಷನ್ ನಂಬರ್ 136.

ಅರ್ಜೀದಾರು.	ಕೌಂಟರ್ ಅರ್ಜಿದಾರು
1 ಕ್ರಿಷ್ಣಪ್ಪ 2 ಕೆಲ್ದೆಲಿಂಗಪ್ಪ 3 ಚಿಕ್ಕನಂಜೈಯ	ಮ್ಯಾನೆಜರ್ ನಂಜಪ್ಪ ವಗೈರೆ.

ಯಿದರಿಂದ ಸಮಸ್ತ ಜನರೀಗೂ ತಿಳಿಯಪಡಿಸುವದೇನಂದರೆ, ಮೇಲ್ಕಂಡ ಕ್ರಿಷ್ಣಪ್ಪ ವಗೈರೆರು ಕಿಲ್ಲ ಫೆಟ್ಟದಲ್ಲಿ ಯಿರುವ ಕಲ್ಯಾಣಾ ಭಿವೃದ್ಧಿ ಕಂಪನಿಯ ಷೇರುದಾರ್‌ರು ರೂಲ್ಸ್ ಪ್ರಕಾರ ಜೊನೆಷ್ಟ ಮತ್ತು ಕಾಲಸು ಮೊಬಲಗು ಕೊಟ್ಟುಗ್ಯೂ ಕಂಪನಿ ಅಧಿಕಾರಿಗಳ ನೂರಾರು ಷೇರದಾರ್‌ರಿಗೆ ಸಹಾಯ ದ್ರವ್ಯ ಕೊಡದೆ ಹೊದ್ದರಿಂದ ಅನೇಕ ಷೇರುದಾರು ಕಾಲ್ಸುಗಳು ಕೊಡದೆ ಬಿಟ್ಟು ಯಿರುತ್ತಾರೆಂತಲೂ ಕಂಪನಿ ಸೌಕರರಿಗೆ ಕಂಪನಿ ಮೂಲಧನದಿಂದ ಬಟವಾಡೆ ಆಗುವದ್ದರಿಂದ ಬಹಳ ಲುಕ್ಸಾನ್ ಆಗುತ್ತೆಂತಲೂ ಕಂಪನಿ ವೈಂಡಪ್ ಮಾಡಿಸ ಬೇಕೆಂದು ವಗೈರೆ ಅರ್ಜೀ ಕೊಟ್ಟು ಯಿರುತ್ತಾರೆ. ಯಿದರ ಇತ್ಯರ್ಥದ ಬಗ್ಯೆ 1890ನೇ ಯಿಸವಿ ಆಗಸ್ಟ್ ತಿಂಗಳು 19ನೇ ತಾರೀಖು ಮಂಗಳವಾರ ಹಿಯರಿಂಗ್ ಮೊಕರರ್ರ‍್ಡಿಯಿಧೆ ಆ ತಾರೀಖು ದಿವಿ 11 ಘಂಟೆಗೆ ಆಕ್ಷೇಪಣೆ ಯಿರತಕ್ಕವರೆಲ್ಲರು ಅವರೆ ಆಗಲೀ ಅವ್ರ ಅಡ್ವೊಕೇಟರಾಗಲಿ ಈ ಕೋರ್ಟು ರೂಬರೂ ಹಾಜರಾಗಬೇಕು.

ತಾರೀಖು 2ನೇ ಆಗಸ್ಟು 1890ನೇ ಇಸವಿ.

ಹುಕ್ಕುಂ ಬನೋಜೀಬ್,
ಎಸ್. ಆರ್. ಸುಬ್ಬರಾಯ ಅಯ್ಯರ್,
ರೆಜಿಸ್ಟ್ರಾರ್.

ವಿದ್ಯಾಭ್ಯಾಸದ ಇಲಾಖೆ.

ಸ್ಯ 1890ನೇ ಇಸವಿ ಜುಲೈ ತಾರೀಖು 26.

ಮೈಸೂರು ದೇಶೀಯ ಪರೀಕ್ಷೆ.

(1) ಪರಿಕ್ಷಾ ಗ್ರಂಥಗಳು.

ಸ್ಯ 1891ನೇ ಇಸವಿ ಫೆಬ್ರವರೀ ತಿಂಗಳಲ್ಲಿ ನಡೆಯತಕ್ಕ ಮೈಸೂರು ದೇಶೀಯ ವಿದ್ಯಾರ್ಥಿ ಪರೀಕ್ಷೆಗೆ ಬಾಲಕೀಯ್ಯರು ಬರುವಂತೆ ಪ್ರೋತ್ಸಾಹ ಪಡಿಸುವದಕ್ಕೋಸ್ಕರ ಪರೀಕ್ಷಾ ಗ್ರಂಥವಾದ ಪದ್ಯಸಾರದಲ್ಲಿ ನೇಮಿಸಲ್ಪಟ್ಟಿರುವ ಭಾಗಗಳಿಗೆ ಬದಲಾಗಿ ಸಾವಿತ್ರೀಚರಿತೆ, ಅಥವಾ ಕಾವ್ಯಪುಂಜ, ಸಂಪೂರ್ಣವಾಗಿ ಪರೀಕ್ಷಾ ಗ್ರಂಥವಾಗಿ ತೆಗದುಕ್ಕೊಳ್ಳಬಹುದು. ಸದರೀ ಗ್ರಂಥಗಳನ್ನ ಭಾಷಾ ಗ್ರಂಥವಾಗಿ ತೆಗದುಕ್ಕೊಳ್ಳುವವರು ಸ್ಯ 1890ನೇ ಇಸವಿ ಅಕ್ಟೋಬರ್ ತಿಂಗಳು 1ನೇ ತಾರೀಖಿ ನೊಳಗಾಗಿ ಮೈಸೂರು ದೇಶೀ ಪರೀಕ್ಷೆಗಳ ಮಾನೇಜರವರಿಗೆ ತಿಳಿಸತಕ್ಕದ್ದು.

(2) ಸ್ಯ 1890ನೇ ಇಸವೀಲಿ ನಡೆದ ಮೈಸೂರು ದೇಶೀಯ ಪರೀಕ್ಷೆಗಳು;

ಇದರಿಂದೀ ಕಂಡ ನಾಲ್ಕು ಮಂದಿ ಹುಡುಗರು 1890ನೇ ಇಸವಿ ಫೆಬ್ರವರೀ ತಿಂಗಳಲ್ಲಿ ನಡೆದ ಮೈಸೂರು ದೇಶೀ ವಿದ್ಯಾರ್ಥಿ ಪರೀಕ್ಷೆಯಲ್ಲಿ ಕೆಲವು ಅಕ್ರಮಗಳು ನಡೆಸಿದಂತೆ ಮೈಸೂರು ದೇಶೀ ಪರೀಕ್ಷಾ ಸಮಾಜದವರ ತಿಳುವಳಿಕೆಗೆ ಬಂದಿರುವದ್ದರಿಂದ ಸದರೀ ಹುಡುಗರು 1891ನೇ ಇಸವಿ ಡಿಸಂಬರ್ ತಿಂಗಳ ಆಖೈರು ವರಿಗೂ ಸದರೀ ಪರೀಕ್ಷೆಗಳಿಗೆ ಬರಕೂಡದೆಂದು ಇದರಿಂದ ಪ್ರಕಟಿಸಲ್ಪಟ್ಟಿದೆ.

ರಿll ನಂ.	ಹೆಸರು.	ಪರೀಕ್ಷಾ ಸ್ಥಳ.
49	ಆರ್. ಮಲ್ಲಪ್ಪ	ಬೆಂಗಳೂರು
50	ಕೆ. ಮಲ್ಲೇಗೌಡ	ಡಿಟೋ
262	ಬಿ. ಶ್ರೀಕಂಠಯ್ಯ	ಮೈಸೂರು
263	ಎಚ್. ನಂಜಪ್ಪ	ಡಿಟೋ

(3) 13ನೇ ನಂಬರು ನಿಬಂಧನೆಯ ಬದಲಾವಣೆ.

ಸ್ಯ 1889ನೇ ಇಸವಿ ಆಗಸ್ಟ್ 6ನೇ ತಾರೀಖಿನ ಪ್ರಕಟನಾ ಪತ್ರಿಕೆಯ 13ನೇ ನಂಬರು ನಿಬಂಧನೆ ಇದರಿಂದೀ ಕಂಡಂತೆ ಬದಲಾಯಿಸಲ್ಪಟ್ಟಿರುತ್ತೆ:—

"ಮೈಸೂರು ಸಂಸ್ಥಾನದ ಸರಕಾರೀ ಮತ್ತು ದೈವ್ಯ ಸಹಾಯ ಪಡೆಯುವ ಪಾಠಶಾಲೆಗಳ ಉಪಾಧ್ಯಾಯರು ಮೈಸೂರು ದೇಶೀಯ್ಯೋ ಪಾಧ್ಯಾಯರ ಪರೀಕ್ಷೆಗೆ ಬಂದು ರೂಪಾಯಿನಂತೆ ರುಸುಂ ಕೊಟ್ಟು ಸೇರಬೇಕು. ಇತರರು ಸದರೀ ಪರೀಕ್ಷೆಗೆ ಸೇರಬೇಕಾದರೆ 3 ರೂಪಾಯಿನಂತೆ ರುಸುಂ ಕೊಡಬೇಕು.

ಹೆಚ್. ಜೆ. ಭಾಭಾ,
ಎಜ್ಯುಕೇಷ್ನ ಸೆಕ್ರಿಟೆರಿ.

ಕಂಟ್ರೋಲರ್‌ರವರ ಸರ್ಕ್ಯುಲರ್ ನಂಬರ್.

ತಾರೀಖು 14ನೇ ಮಾಹೆ ಆಗಸ್ಟ್ ಸ್ ಸ 1890ನೇ ಇಸವಿ ಬೆಂಗಳೂರು.

ಟ್ರೆಜರಿ ಡಿಪಾರ್ಟ್‌ಮೆಂಟ್ ಡೆಪ್ಯುಟಿ ಕಮ್ಮಿಷನರ್‌ಗಳಿಗೆ ಮತ್ತು ತಾಲ್ಲೂಕು ಅಮಲ್ದಾರ್ರುಗಳಿಗೆ ಸಹ.

ಹೋಬಳಿ ಸ್ಕೂಲ್ ಮ್ಯಾಸ್ಟ್ರ್‌ಗಳ ತಲಬು ಬಟವಾಡೆ ಮಾಡುವ ಭಾಗದಲ್ಲಿ ಹಾಲಿ ನಾನಾವಿಧವಾದ ಪದ್ಧತಿಗಳು ಯಿರುವದ್ದರಿಂದ ಎಜ್ಯುಕೆಷ್ನ್ ಸೆಕ್ರಿಟೇರಿ ಯವರ ಅನುಮತಿಯಿಂದ ಕಂಟ್ರೊಲರ್ ಸಾಹೆಬರವರು ಆಫೀಸ್ ನುಜಕೂರು 1874ನೇ ವರ್ಷದ ಮಾರ್ಚ್ 7ನೇ ಮರ್ಕುಂ 1093ನೇ ನಂಬರ್ ಸರ್ಕ್ಯುಲರ್ ಅನುಸರಿಸಿ ತಿಳಿಯಪಡಿಸುವದೇನಂದರೆ:—

ಹೋಬಳಿ ಮ್ಯಾಸ್ಟ್ರುಗಳು ತಮ್ಮ ತಲಬನ್ನ ತೆಗದುಕೊಳ್ಳಲು ತಾಲ್ಲೂಕು ಖಜಾನೆಗೆ ತಾವೆ ರೂಬರೂ ಬರುವದಕ್ಕೆ ಆಗಲಿ ಅಥವಾ ಆ ಬಗ್ಗೆ ಮತ್ತೊಬರನ್ನಾ ಕಳುಹಿಸಿಕೊಡುವದಕ್ಕೆ ಆಗಲಿ ಅವಕಾಶ ಕೊಡಕೂಡದು ಆಯಾ ಹೋಬಳಿ ಶೇಕ್‌ದಾರುಗಳು ತಮ್ಮ ತಮ್ಮ ಸಂಮತ್ತಿಗೆ ವಳಪಟ್ಟ ಮ್ಯಾಸ್ಟರುಗಳ ತಲಬನ್ನ ತಾಲ್ಲೂಕು ಖಜಾನೆಯಿಂದ ತೆಗದುಕೊಂಡು ಪ್ರತಿ ಮಾಹೆಯ 10ನೇ ತಾರೀಖು ವಳಗಾಗಿ ಬಟವಾಡೆ ಮಾಡುವಂತೆ ಹುಕ್ಕುಂ ಮಾಡಬೇಕು. ಸಬಬ್ ದರಸಬಬ್‌ನಿಂದ ಶೇಕ್‌ದಾರು ತಾವೆ ರೂಬರೂ ಹಾಜರಿತಿ ಮಾಡಲು ಅವಕಾಶ ತಪ್ಪಿದಲ್ಲಿ ಅವರ ಸೈ ಜವಾನರ ಮೂಲಕ ಬಟವಾಡೆ ಮಾಡಿಸಿ ಮ್ಯಾಸ್ಟರುಗಳಿಂದ ಕ್ರಮವಾದ ರಸೀತಿ ಪಡೆಯಲು ಶೇಕ್‌ದಾರಿಗೆ ಅಧಿಕಾರ ಕೊಡಬಹುದು. ಆದರೆ ಕ್ಲಿಪ್ತವಾದ ತಾರೀಖು ವಳಗಾಗಿ ಕ್ರಮವಾಗಿ ಬಟವಾಡೆಯಾಗುವದರಲ್ಲಿ ಹೋಬಳಿ ಶೇಕದಾರ್ರೇ ಜವಾಬದಾರ್ರಾಗಿರಬೇಕು.

ಅನಾವಶ್ಯಕವಾದ ಬರವಣಿಗೆಗೆ ಆಗಲಿ ಸರಕಾರಕ್ಕೆ ಆಗಲಿ ಅವಕಾಶ ಕೊಡದಂತೆ ತಾಲ್ಲೂಕು ಖಜಾನೇ ಆಫೀಸರುಗಳು ಎಜ್ಯುಕೇಷ್ನ ಸೆಕ್ರಿಟೇರಿಯವರಿಂದ ಅಥವಾ ಸ್ಕೂಲ್ ಡೆಪ್ಯುಟಿ ಇನ್‌ಸ್ಪೆಕ್ಟರಿಂದ ಹೋಬಳಿ ಮ್ಯಾಸ್ಟರಿಗೆ ಜುರ್ಮಾನೆ ಮೊಕರರಾಗಿ ತಲಪುವ ನಾನಾ ವಿಧೆಗಳ ಸಂಗತಿ ಕುರಿತು ತಾಲ್ಲೂಕು ಬರ್ತಾವರ್ದಿನಲ್ಲಿ ಆ ಕೂಡ್ಲೆ ನೋಟ್ ಮಾಡಿಕೊಂಡಿದ್ದು ಅದರಂತೆ ಜಾರೀಲಿತರಬೇಕು.

ಎ. ರಂಗಸ್ವಾಮಯ್ಯಂಗಾರ್,
ಕಾಂಪ್ಟ್ರೋಲರ್.

ಮೈಸೂರು ಶೀವಮೊಯ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರಿಂದ ಕೊಡಲ್ಪಟ್ಟ ನೊಟೀಸ್.

ಬೆಂಗಳೂರು ತಾರೀಖು 12ನೇ ಆಗಸ್ಟ್ 1890ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದಾವಣಿಗೆರೆ ತಾಲ್ಲೂಕು ಹುಲಗಿನ ಹೊಳೆ ಗ್ರಾಮದ ಸಮೀಪದಲ್ಲಿ ತುಂಗಭದ್ರಾ ನದಿಯಲ್ಲಿ ತೇಲಿಬಂದ ಇದರಡಿ ನಮೂದಿಸಿರುವ ಅಳತೆಯುಳ್ಳ 103ನೇ ನಂಬರ್ ಕರೆಮತ್ತಿ ಸಾಟ ಸಿಕ್ಕಿರುತ್ತೆ.

ಲಾಂಬಿ	21½ ಅಡಿ.
ಬುಡದ ಸುತ್ತಳತೆ	5 ಡಿಟೋ
ಮೇಲಭಾಗದ ಸುತ್ತಳತೆ	4 ಡಿಟೋ

ಮೇಲ್ಕಂಡ ಸಾಟ ಹೂಲಗಿನ ಹೊಳೆ ಗ್ರಾಮದ ಪಟೇಲನ ವಶದಲ್ಲಿರುತ್ತೆ, ಈ ನೊಟೀಸ್ ಗೆಜೆಟ್ಟಿನಲ್ಲಿ ಪ್ರಾಯಿಷ್ ಆದ 2 ತಿಂಗಳ ವಳಗಾಗಿ ಸದರೀ ಸಾಟುವಿಗೆ ಹಕ್ಕುದಾರಿಯುಳ್ಳವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಲ್ಲಿ ಜಾಹಿರ್ ಮಾಡಿಕೊಳ್ಳಬೇಕು. ಈ ವಾಯಿದೆ ತರುವಾಯ ಯಾವ ಹಕ್ಕುದಾರಿಯು ಅಂಗೀಕರಿಸಲ್ಪಡುವದಿಲ್ಲ, ಸದರೀ ಸಾಟುಕ್ಕೆ ಯಾರು ಹಕ್ಕುದಾರಿ ಸ್ಥಿರಪಡಿಸಿ ಕೊಳ್ಳದೆ ಹೋದಲ್ಲಿ ಅದು ಸರಕಾರಕ್ಕೊಕ್ಕೀಸ್ತರ ಹರಾಜು ಮಾಡಲ್ಪಡುವದು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 22ನೇ ಜುಲೈ 1890.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನೆಂದರೆ ಸಾಲಿಹಾಲ್ ವಿಕೃತಿ ಸಂವತ್ಸರಕ್ಕೆ ದಾಖಲಾಗತಕ್ಕ ಕೆಂಗೇರಿ ಹೊಬಳಿ ಜಂಗಲಿ ಫಸಾರೆ ಶಿಥಾಪಲ ವಗೈರೆ ಬಾಬ್ ಮಾಮುಲ್ ಅನುಸರಿಸಿ ಬರುವ ಆಗಸ್ಟು ಮಾಹೆ 21ನೇ ತಾರೀಖು 12 ಘಂಟೆಗೆ ಬೆಂಗಳೂರು